**ಕರ್ನಾಟಕ ಸರ್ಕಾರ**

**(ಸಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ** |
| **(ಆರ್.ಪಿ.ಸಂಖ್ಯೆ 57)** |
| **ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ,**

**ಹಾಸನ**

**ಸ್ಪೆಷಲ್ ಕೇಸ್ ನಂಬರ್ :: 140/2015**

ಪ್ರಾಸಾ- 19 ಚಾಸಾ- 22

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ರಾಘವೇಂದ್ರ ಎಂ.ಎಸ್. |
| ತಂದೆಯ ಹೆಸರುಃ | ಃ | ಶಿವಾಜಿ ರಾವ್ |
| ವಯಸ್ಸುಃ | ಃ | 38 ವರ್ಷ |
| ಉದ್ಯೋಗಃ | ಃ | ಅಕೌಂಟೆಂಟ್, ಶಿವ ಗ್ಯಾಲಾಕ್ಸಿ, ಬೆಂಗಳೂರು |
| ವಾಸಃ | ಃ | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 19-04-2024**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2013 ನೇ ಸಾಲಿನಲ್ಲಿ ಹಾಸನದ ಹೆಚ್.ಪಿ. ಗ್ಯಾಸ್ ಏಜೆನ್ಸಿಯಾಗಿದ್ದ ದಿ ಹಾಸನ ಗ್ಯಾಸ್ ಸಪ್ಲೈಸ್ ಕಂಪೆನಿಯಲ್ಲಿ ಸೂಪರ್ ವೈಸರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ನವೆಂಬರ್ 2013 ರಲ್ಲಿ ಹಾಸನ ಲೋಕಾಯುಕ್ತ ಪೊಲೀಸರು ನಮ್ಮ ಏಜೆನ್ಸಿ ಸಂಸ್ಥೆಗೆ ಮಂಜುನಾಥ್ ರವರ ಹೆಂಡತಿ ಪದ್ಮಾವತಿರವರ ಹೆಸರಿನಲ್ಲಿದ್ದ ಗ್ಯಾಸ್ ಕನೆಕ್ಷನ್ ನಂಬರನ್ನು ನೀಡಿ ಆ ಬಗ್ಗೆ ವಿವರವನ್ನು ನೀಡುವಂತೆ ಕೇಳಿಕೊಂಡಿರುತ್ತಾರೆ. ಅದರಂತೆ ನಾನು ಪದ್ಮಾವತಿಯವರ ಗ್ಯಾಸ್ ಕನೆಕ್ಷನ್ ಬಗ್ಗೆ ಡೆಪಾಸಿಟ್ ಹಣ ಎಷ್ಟು ಇದೆ ಮತ್ತು ನಮ್ಮ ದಾಖಲೆಯಲ್ಲಿ ಲಭ್ಯವಿರುವಂತೆ ಪದ್ಮಾವತಿಯವರು ಎಷ್ಟು ರೀಫಿಲ್ ಗ್ಯಾಸ್ ಸಿಲಿಂಡರ್ ಪಡೆದುಕೊಂಡಿರುತ್ತಾರೆ ಎಂಬ ಬಗ್ಗೆ ವಿವರವನ್ನು ನಾನು ಹಾಸನ ಲೋಕಾಯುಕ್ತ ಪೊಲೀಸರಿಗೆ ನೀಡಿರುತ್ತೇನೆ. ಈಗ ತೋರಿಸಿದ ಪತ್ರ ಆ ರೀತಿ ನಾನು ಲೋಕಾಯುಕ್ತ ಪೊಲೀಸರಿಗೆ ನೀಡಿರುವ ಮಾಹಿತಿಯಾಗಿದ್ದು ಅದನ್ನು ನಿಶಾನೆ

ಪಿ.106 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.106(ಎ) ಎಂದು ಗುರುತಿಸಲಾಗಿದೆ ಸದರಿ ಪತ್ರದ ಜೊತೆಯಲ್ಲಿ ರೀಫಿಲ್ ಸಿಲಿಂಡರ್ ಪಡೆದುಕೊಂಡಿರುವ ಬಗ್ಗೆ ವಿವರಗಳನ್ನು ನೀಡಿದ್ದು ಅದನ್ನು ನಿಶಾನೆ ಪಿ.107 ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.107(ಎ) ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಎನ್.ಆರ್. ವಕೀಲರಿಂದ ಶ್ರೀ ಸಿ.ಎನ್.ವಿ. ವಕೀಲರ ಪರವಾಗಿಃ**

ನಾನು ಲೋಕಾಯುಕ್ತ ಪೊಲೀಸರ ಕೋರಿಕೆ ಮೇರೆಗೆ ನಿಶಾನೆಪಿ.106 ಮತ್ತು 107 ರಂತೆ ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**
**ಸ್ಪೆಷಲ್ ನ್ಯಾಯಾಧೀಶರು, ಹಾಸನ.**